

ಜಕ್ಕೂರು ಏರೋಡ್ರಂನಲ್ಲಿ ವಿಮಾನಕ್ಕೆ ಅಳವಡಿಸಿದ ಮೋಡ ಬಿತ್ತನೆ ಉಪಕರಣದ ದೃಶ್ಯ

71ನೇ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ಮಧ್ಯರಾತ್ರಿ. ಬೆಂಗಳೂರಿನಲ್ಲಿ ಮೇಘ ಸ್ಫೋಟಗೊಂಡಿತ್ತು. ಆ ದಿನ ಮಳೆ ನೀರಿಗೆ ಅರ್ಧಕ್ಕರ್ಧ ಊರೇ ಮುಳುಗಿತ್ತು. ಅತ್ತ ಜಕ್ಕೂರು ಏರೋ ಡ್ರಂನಲ್ಲಿ ಅಮೆರಿಕಾದಿಂದ ಬಂದಿಳಿದಿದ್ದ ಮೋಡ ಬಿತ್ತನೆಯ ಪುಟ್ಟ ವಿಮಾನ ಬೆಡಗು ಬೀರುವ ಯುವತಿಯಂತೆ ನೆಲದಲ್ಲೇ ನಿಂತಿತ್ತು, ಎಲ್ಲರ ಬೆರಗಿನ ಕಣ್ಣು ಅದರ ಮೇಲೆ. ಅದನ್ನು ತಂದವರ ಕಣ್ಣು ಮಾತ್ರ ಆಗಸದಲ್ಲಿ ಸರಿದು ಹೋಗುತ್ತಿದ್ದ ಮೇಘಗಳ ಹಿಂಡುಗಳತ್ತ. ಅಧಿಕಾರಿಗಳು, ರಾಜಕಾರಣಿಗಳ ಮನಸ್ಸು ಮತ್ತು ಬುದ್ಧಿಯನ್ನೂ ಮೋಡ ಆವರಿಸಿತ್ತು. ಕುಳಿತರೂ ನಿಂತರೂ ಅವರಿಗೆ ಮೋಡದ್ದೇ ಧ್ಯಾನ. ಆ. 16ರ ಮಧ್ಯಾಹ್ನ ಪುಟ್ಟ ವಿಮಾನ ಆಗಸಕ್ಕೆ ಜಿಗಿದು, ಮೋಡಗಳನ್ನು ಬೆನ್ನತ್ತಿ ಬೀಜಗಳನ್ನು ಸುರಿಸಿ ಮಳೆಯ ಬೆಳೆ ತೆಗೆಯುವ ಕಾತರ ಅದರದ್ದಾಗಿತ್ತು.

ಕೆಲವು ತಿಂಗಳ ಹಿಂದಿನ ಮಾತು, ರಾಜ್ಯದಲ್ಲಿ ಬರದ ಛಾಯೆ ಕಾಣಿಸಿಕೊಂಡಿದೆ ಎಂಬ ವರ್ತಮಾನ ಕೇಳಿಬರುತ್ತಿದ್ದಂತೆಯೇ, ಮೋಡ ಬಿತ್ತನೆಯ ಕನಸೂ ಮೊಳಕೆಯೊಡೆಯಿತು. ಹಾಗೆ ನೋಡಿದರೆ ರಾಜ್ಯದಲ್ಲಿ ಮೋಡ ಬಿತ್ತನೆ ಇದೇ ಮೊದಲಲ್ಲ. ಹಿಂದೆ ಎಸ್.ಎಂ.ಕೃಷ್ಣ ಅವರ ಸರ್ಕಾರ ಇದ್ದಾಗಲೂ ಮೋಡ ಬಿತ್ತನೆಯ ಯತ್ನ ನಡೆದಿತ್ತು. ಆದರೆ ಬಿತ್ತನೆಯ ಬಳಿಕ ಮಳೆ ಬಂದದ್ದಕ್ಕೆ ಲೆಕ್ಕ ಸಿಗಲಿಲ್ಲ. ಬಂದ ಮಳೆಯನ್ನೇ ಬಿತ್ತನೆಯ ಫಲ ಎಂದು ಹಲವರು ಸಮಾಧಾನ ಪಟ್ಟುಕೊಂಡಿದ್ದರು.

ಮೋಡ ಬಿತ್ತಿದರೆ ನಿಜಕ್ಕೂ ಮಳೆ ಬರುತ್ತದೆಯೆ? ಈ ಪ್ರಶ್ನೆಗೆ 'ಇದಮಿತ್ಥಂ' ಎಂಬ ಉತ್ತರ ಇಲ್ಲ. ಮೋಡ ಬಿತ್ತನೆಯ ಪರ ಮತ್ತು ವಿರುದ್ಧ ಬಲವಾದ ಅಭಿಪ್ರಾಯಗಳಿವೆ. ಅದರ ಯಶಸ್ಸಿನ ಬಗ್ಗೆ ಜಾಗತಿಕ ಮಟ್ಟದಲ್ಲಿಯೇ ಸಂಶಯವಿದೆ. 'ಹಣ ಪೋಲು ಮಾಡುವ ಒಂದು ವ್ಯರ್ಥ ಪ್ರಯತ್ನ' ಎಂಬ ಮಾತುಗಳು ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳಿಂದಲೂ ಕೇಳಿ ಬಂದಿವೆ. ಆದರೂ ಈ ಬಾರಿ ರಾಜ್ಯ ಸರ್ಕಾರ ಪುನಃ ಮೋಡ ಬಿತ್ತನೆಗೆ ಕೈಹಾಕಿದೆ.

